

بسم اللهِ الرّحمٰن الرّحيم

# ಅಲ್ಲಾಹನ ಸಾಮಿಪ್ಯ ಗಳಿಸಲು ನಮಾಝ್‌ನಲ್ಲಿ ಭಯಭಕ್ತಿ ಮತ್ತು ನಿರಂತರ ಪ್ರಯತ್ನ ಅಗತ್ಯ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ10-04-2015 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ತಿಲಾವತ್ ಮಾಡಿದರು)*

قَدْ أَفْلَحَ الْمُؤْمِنُونَ - الَّذِينَ هُمْ فِي صَلَاتِهِمْ خَاشِعُونَ

**ಖದ್ ಅಫಲಹಲ್ ಮೂಮಿನೂನ, ಅಲ್ಲಝೀನ ಹುಮ್ ಫೀ ಸಲಾತಿಹಿಮ್ ಖಾಶಿಊನ್.**

"ಖಂಡಿತವಾಗಿಯೂ ಆ ಸತ್ಯವಿಶ್ವಾಸಿಗಳು ಜಯಗಳಿಸಿದರು. ಅವರು ತಮ್ಮ ನಮಾಝಿನಲ್ಲಿ ವಿನಮ್ರರಾಗಿರುತ್ತಾರೆ"(23:2,3)

ನಂತರ ಹುಝೂರ್ ಹೇಳಿದರು: ಮೊದಲನೆ ವಚನದಲ್ಲಿ **'ಖದ್ ಅಫ್‌ಲಹಲ್ ಮೂಮಿನೂನ್'** ಎಂದು ಹೇಳಿ ಸತ್ಯವಿಶ್ವಾಸಿಗಳು ನಿಶ್ಚಯವಾಗಿಯೂ ಜಯಶಾಲಿಗಳಾಗುವರೆಂದು ಶುಭವಾರ್ತೆ ನೀಡಲಾಗಿದೆ. ಆದರೆ ಜಯಶಾಲಿಗಳಾಗುವವರು ಎಂತಹ ಸತ್ಯವಿಶ್ವಾಸಿಗಳು? ಅವರ ಬಗ್ಗೆ ಅನೇಕ ಶರತ್ತುಗಳನ್ನು ಮುಂದಿನ ವಚನಗಳಲ್ಲಿ ವಿವರಿಸಲಾಗಿದೆ. ಆ ಶರತ್ತುಗಳನ್ನು ಅನುಸರಿಸಿ ಜೀವಿಸುವ ಸತ್ಯವಿಶ್ವಾಸಿಗಳೇ ಜಯಶಾಲಿಗಳಾಗುವವರಾಗಿದ್ದಾರೆ. ಆ ಶರತ್ತುಗಳಲ್ಲಿ ಒಂದು, ಎಂದರೆ ಸತ್ಯ ವಿಶ್ವಾಸಿ ಹೊಂದಬೇಕಾದ ಸದ್ಗುಣಗಳಲ್ಲಿ ಪ್ರಥಮವಾದುದು **ಫೀ ಸಲಾತಿಹಿಮ್ ಖಾಶಿಊನ್** ಆಗಿದೆ. ಅವರು ತಮ್ಮ ನಮಾಝ್‌ಗಳಲ್ಲಿ ಭಯಭಕ್ತಿ ತೋರಿಸುವವರಾಗಿದ್ದಾರೆ. ಸಾಮಾನ್ಯವಾಗಿ **ಖಾಶಿಅ್** ಎಂಬ ಪದಕ್ಕೆ ನಮಾಝ್‌ನಲ್ಲಿ ಅತ್ತು ಪ್ರಾರ್ಥಿಸುವವರು ಎಂದು ಅರ್ಥ ನೀಡಲಾಗುತ್ತಿದೆ. ಆದರೆ ಈ ಪದಕ್ಕೆ ಬೇರೆ ಅರ್ಥಗಳೂ ಇವೆ. ಈ ಎಲ್ಲ ಅರ್ಥಗಳನ್ನು ಈಡೇರಿಸುವ ತನಕ ಒಬ್ಬ ಸತ್ಯವಿಶ್ವಾಸಿ ವಿಶ್ವಾಸಿ ಎಂಬ ಪದದ ವಾಸ್ತವಿಕ ಮಟ್ಟವನ್ನು ತಲಪಲಾರ. ನಿಘಂಟುಗಳಲ್ಲಿರುವ ಅರ್ಥಗಳ ಪ್ರಕಾರ ಈ ಪದಕ್ಕೆ ಅತ್ಯಂತ ವಿನಯಾನ್ವಿತ, ತನ್ನನ್ನು ಬಹಳ ತಗ್ಗಿಸುವವನು, ತನ್ನ ಅಹಂಭಾವವನ್ನು ಅಳಿಸಿ ಬಿಡುವವನು, ತಗ್ಗಿ ನಡೆಯುವವನು, ತನ್ನನ್ನು ಮಹತ್ವಹೀನನನ್ನಾಗಿ ಮಾಡಲು ಪ್ರಯತ್ನಪಡುವವನು, ದೃಷ್ಟಿ ತಗ್ಗಿಸಿಡುವವನು, ಮಾತನಾಡುವಾಗ ಧ್ವನಿ ತಗ್ಗಿಸುವವನು ಎಂಬಿತ್ಯಾದಿ ಅರ್ಥಗಳಿವೆ.

ನೋಡಿರಿ, ಈ ಒಂದು ಶಬ್ದವನ್ನು ಬಳಸಿ ಒಬ್ಬ ನೈಜ ಸತ್ಯವಿಶ್ವಾಸಿಯ ನಮಾಝ್ ಮತ್ತು ಆರಾಧನೆಯ ಎಂತಹ ವಿಶಾಲ ಚಿತ್ರ ಬರೆಯಲಾಗಿದೆ. ಅಲ್ಲಾಹನ ಮುಂದೆ ತನ್ನ ಆರಾಧನೆಗಳ ಮಟ್ಟವನ್ನು ಈ ರೀತಿ ಮಾಡಲು ಯಾರು ಬಾಗುವನೋ ಅವನು ತನ್ನ ವಿನಯವನ್ನು ಅತ್ಯಂತ ಉನ್ನತ ಮಟ್ಟಕ್ಕೇರಿಸುವನು. ಅವನು ಅಲ್ಲಾಹನ ಸಂಪ್ರೀತಿ ಗಳಿಸಲು ತನ್ನ ಅಹಂಭಾವವನ್ನು ಅಳಿಸಿಬಿಡುವವನಾಗುವನು. ಅದೇ ರೀತಿ ಇಲ್ಲಿ ವಿವರಿಸಲಾದ ಇತರ ಎಲ್ಲ ವೈಶಿಷ್ಟ್ಯಗಳನ್ನು ತನ್ನದನ್ನಾಗಿ ಮಾಡಿಕೊಳ್ಳುವವನಾಗುತ್ತಾನೆ. ಅವನು ಅಲ್ಲಾಹನ ಸಾಮೀಪ್ಯಪಡೆಯಲಿಕ್ಕಾಗಿ ಅಲ್ಲಾಹನ ಹಕ್ಕುಗಳನ್ನು ಈಡೇರಿಸುವುದರ ಜೊತೆಗೆ ಅಲ್ಲಾಹನ ಆಜ್ಞೆಗಳ ಪ್ರಕಾರ ಅವನ ಸೃಷ್ಟಿಗಳ ಹಕ್ಕುಗಳನ್ನೂ ಈಡೇರಿಸುವವನಾಗುವನು. ಆಗ ಅವನ ನಮಾಝ್ ಅವನ ಲೌಕಿಕ ವ್ಯವಹಾರಗಳನ್ನು ಸರಿಪಡಿಸುವಂತಹದು ಸಹ ಆಗುವುದು. ಅವನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ

**ಬದ್‌ತರ್ ಬನೋ ಹರ್ ಏಕ್‌ಸೆ ಅಪ್ನೇ ಖಿಯಾಲ್‌ಮೇಂ.**

**ಶಾಯದ್ ಕೆ ಉಸ್‌ಸೆ ದಖಲ್ ಹೋ ದಾರುಲ್ ವಿಸಾಲ್‌ಮೇಂ.**

"ತನ್ನನ್ನು ತನ್ನ ಯೋಚನೆಯಲ್ಲಿ ಪ್ರತಿಯೊಬ್ಬನಿಗಿಂತ ಕೀಳ್ಮಟ್ಟದವನೆಂದು ಭಾವಿಸು. ಪ್ರಾಯಶಃ ಇದರಿಂದ ನಿನಗೆ ಸ್ವರ್ಗ ಪ್ರವೇಶ ದೊರಕಬಹುದು."

ಈ ರೀತಿ ಆಗಲು ಪ್ರಯತ್ನಿಸುವವನಾಗುತ್ತಾನೆ. ತನ್ನನ್ನು "ನಾನು" ಎಂಬ ಅಹಂಭಾವದ ಚಕ್ರವ್ಯೂಹದಿಂದ ಸ್ವತಂತ್ರಗೊಳಿಸಲು ಪ್ರಯತ್ನಿಸುತ್ತಾ ಇರುವವನು ತನ್ನ ಲೌಕಿಕ ಸಮಸ್ಯೆಗಳನ್ನೂ ಪರಿಹರಿಸಿ ಕೊಳ್ಳುವನು. ಅಥವಾ ಅದನ್ನು ಪರಿಹರಿಸಲು ಪ್ರಯತ್ನ ಮಾಡುವನು. ಅವನು ತನ್ನ ದೃಷ್ಟಿಯನ್ನು ನಾಚಿಕೆಯಿಂದ ತಗ್ಗಿಸಿಡುತ್ತಾ, ನಮಾಝ್‌ನಲ್ಲಿ ಮಾತ್ರವಲ್ಲ ಇನ್ನಿತರ ದೈನಂದಿನ ಚಟುವಟಿಕೆಗಳಲ್ಲಿ ಸಹ ಆ ರೀತಿ ನಡೆದುಕೊಂಡು ಸಮಾಜದ ಅಸಂಖ್ಯಾತ ಕೆಡುಕುಗಳಿಂದ ತನ್ನನ್ನು ರಕ್ಷಿಸಿಕೊಳ್ಳುವನು. ಅಥವಾ ಅದಕ್ಕೋಸ್ಕರ ಪ್ರಯತ್ನಿಸುವನು. ತನ್ನ ಧ್ವನಿಯನ್ನು ತಗ್ಗಿಸುವನು. ಆರಾಧನೆಗೆ ಸಂಬಂಧಿಸಿ ಅವರ ಬಗ್ಗೆ ಅರಿವನ್ನು ಹೊಂದಿರುವನಲ್ಲದೆ ತನ್ನ ದೈನಂದಿನ ಚಟುವಟಿಕೆಗಳಲ್ಲಿ ಚೀರುವುದರಿಂದಲೂ ಬೊಬ್ಬೆ ಹೊಡೆಯುವುದರಿಂದಲೂ ಜಗಳ ಮಾಡುವುದರಿಂದಲೂ ತನ್ನನ್ನು ರಕ್ಷಿಸಿಕೊಳ್ಳುವನು. ಅಥವಾ ಅದಕ್ಕೋಸ್ಕರ ಪ್ರಯತ್ನ ಮಾಡುವನು. ದೈನಂದಿನ ಕೆಲಸಗಳಲ್ಲಿ ಸಂಭವಿಸುವ ಅನೇಕ ಕೆಡುಕುಗಳನ್ನು ಒಬ್ಬ ಸತ್ಯವಿಶ್ವಾಸಿ ತನ್ನ ನಮಾಝ್ ಮತ್ತು ಆರಾಧನೆಯ ಕಾರಣದಿಂದ ಕೊನೆಗೊಳಿಸುತ್ತಾನೆ.

ಅಲ್ಲಾಹನು ಹೇಳುವುದೇನೆಂದರೆ ಇಂತಹ ನಮಾಝ್ ಅನುಷ್ಠಿಸುವವರು ಮತ್ತು ಇಂತಹ ಪ್ರಭಾವವನ್ನು ತಮ್ಮಲ್ಲಿ ಸ್ಥಾಪಿಸಿಕೊಳ್ಳುವವರು ಜಯಶಾಲಿಗಳಾಗುವರು ಎಂದು. ಜಯಶಾಲಿಯಾಗುವುದು ಎಂಬ ಪ್ರಯೋಗ ಸಹ ಬಹಳ ವಿಶಾಲವಾದ ಅರ್ಥವನ್ನು ಹೊಂದಿದೆ. ಸೌಲಭ್ಯಗಳು ದೊರಕುವುದು, ಸಂಪತ್ತನ್ನು ಗಳಿಸುವುದು,

ಅದೃಷ್ಟವಂತರಾಗುವುದು, ಅಭಿಲಾಷೆಗಳು ಈಡೇರುವುದು, ಸಂರಕ್ಷಣೆ ದೊರಕುವುದು, ಉತ್ತಮ ಭವಿಷತ್‌ಕಾಲ, ಲೌಕಿಕ ಅನುಗ್ರಹಗಳು ದೊರಕುವುದು ಇವುಗಳೆಲ್ಲಾ ಜಯಶಾಲಿಯಾಗುವುದರ ಅರ್ಥದಲ್ಲಿ ಒಳಪಡುತ್ತದೆ.

ಒಳಿತುಗಳನ್ನು ಮಾಡುವವರು ಯಾವ ರೀತಿಗಳಲ್ಲಿ ಲಾಭ ಪಡೆಯುತ್ತಾರೆ, ಅಲ್ಲಾಹನಿಗೋಸ್ಕರ ಒಳಿತುಗಳನ್ನು ಮಾಡುವವರಿಗೆ ಅಲ್ಲಾಹನು ಯಾವ್ಯಾವ ರೀತಿಗಳಲ್ಲಿ ಅನುಗ್ರಹ ನೀಡುತ್ತಾನೆ, ಇವುಗಳೆಲ್ಲ ಮನುಷ್ಯನ ಕಲ್ಪನೆಗೆ ನಿಲುಕದವುಗಳಾಗಿವೆ. ಅಲ್ಲಾಹನ ಈ ಅನುಗ್ರಹಗಳನ್ನು ಗಳಿಸಲು ಸತ್ಯವಿಶ್ವಾಸಿ ಹಾಕಬೇಕಾದ ಮೊದಲ ಹೆಜ್ಜೆ ನಮಾಝ್‌ನಲ್ಲಿ ಭಯಭಕ್ತಿಯನ್ನು ಹೊಂದುವುದಾಗಿದೆ. ಅನುಗ್ರಹಗಳನ್ನು ಗಳಿಸಲು ಆರಾಧನೆ ಮಾಡಬೇಕಾದುದು ಆವಶ್ಯಕವಾಗಿದೆ. ಕೇವಲ ವಿನಯವನ್ನು ಪ್ರದರ್ಶಿಸುವುದು, ಅದನ್ನು ಕೆಲವು ಲೌಕಿಕ ವ್ಯಕ್ತಿಗಳೂ ಮಾಡುತ್ತಾರೆ. ವಿನಯದ ಬಗ್ಗೆ ಹೇಳುವುದಾದರೆ ಕೆಲವರು ಚಿಕ್ಕಪುಟ್ಟ ವಿಷಯಗಳಿಗಾಗಿ ಎಷ್ಟು ಗೋಳಿಡುತ್ತಾರೆಂದರೆ ಬಹಳ ಆಶ್ಚರ್ಯವಾಗಿ ಬಿಡುತ್ತದೆ. ಲೌಕಿಕವಾಗಿ ನಷ್ಟ ಸಂಭವಿಸುವ ಸಂದರ್ಭದಲ್ಲಿ ಅವರು ತಮ್ಮನ್ನು ಅತ್ಯಂತ ತಗ್ಗಿಸುವವರಾಗುತ್ತಾರೆ. ಕೆಲವರಿಗೆ ಕೆಲವು ಸಂದರ್ಭಗಳಲ್ಲಿ ಕೆಲವು ಜನರ ಸ್ಥಿತಿಯನ್ನು ಕಾಣುವಾಗ ದಯೆ ಉಂಟಾಗುತ್ತದೆ. ಬಹಳ ನೋವನ್ನುಂಟುಮಾಡುವ ಸ್ಥಿತಿಯನ್ನು ಕಂಡಾಗ ಅವರು ಭಾವಪರವಶರಾಗುತ್ತಾರೆ. ಆದರೆ ಇವುಗಳೆಲ್ಲಾ ಅವರು ತಮ್ಮ ಸ್ವಂತ ಲಾಭಕ್ಕೋಸ್ಕರ ಅಥವಾ ಲೋಕಕ್ಕೆ ತೋರಿಸಲಿಕ್ಕಾಗಿ, ಅಥವಾ ತಾತ್ಕಾಲಿಕ ಭಾವನೆಗಳಿಂದಾಗಿ ಮಾಡುವುದಾಗಿದೆ. ಅವರು ಈ ರೀತಿ ಮಾಡುವುದು ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕೋಸ್ಕರವಾಗಿರುವುದಿಲ್ಲ. ಆದರೆ, ಅಲ್ಲಾಹನ ಪ್ರೀತಿ ಸಂಪಾದಿಸಲು ಬಯಸುವವನು ಈ ಎಲ್ಲ ಬಾಹ್ಯ ಪ್ರಕಟಣೆಗಳಿಂದ ದೂರವಿರುತ್ತಾನೆ. ಲೌಕಿಕ ಜನರು ಭಾವೋದ್ವೇಗಗಳನ್ನು ಹೊಂದುವ ಬಗ್ಗೆ ಮತ್ತು ತಾತ್ಕಾಲಿಕವಾಗಿ ಅತ್ತು ಗೋಳಿಡುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: "ನಾನು ಅನೇಕ ಫಕೀರರನ್ನು ಕಂಡಿದ್ದೇನೆ. ಹಾಗೂ ಬಹಳಷ್ಟು ಇತರ ಜನರನ್ನೂ ಸ್ವತಃ ನೋಡಿದ್ದೇನೆ. ಅವರು ದುಃಖದಾಯಕ ಪದ್ಯ ಆಲಿಸಿದಾಗ, ದುಃಖಕರ ದೃಶ್ಯಕಂಡಾಗ, ದುಃಖದಾಯಕ ಕಥೆ ಆಲಿಸಿದಾಗ ಅವರು ಎಷ್ಟು ಬೇಗ ಕಣ್ಣೀರು ಸುರಿಸುತ್ತಾರೆಂದರೆ ಕೆಲವು ಸಾರಿ ಮೋಡದಿಂದ ದಿಡೀರನೆ ಮಳೆ ಸುರಿಯುವ ಹಾಗೆ. ಅಂಗಳದಲ್ಲಿ ಮಲಗಿದವರಿಗೆ ತಮ್ಮ ಹಾಸು ಹೊದಿಕೆಗಳನ್ನು ಒದ್ದೆಯಾಗದಂತೆ ರಕ್ಷಿಸಿಕೊಂಡು ಹೋಗಲು ಅಸಾಧ್ಯವಾದ ರೀತಿಯಲ್ಲಿ ಪಕ್ಕನೆ ಮಳೆಸುರಿಯುವ ಹಾಗೆ. ಆದರೆ ನಾನು ನನ್ನ ಸ್ವಂತ ಅನುಭವದ ಪ್ರಕಾರ ಸಾಕ್ಷ್ಯ ನೀಡುತ್ತೇನೆ– ಇಂತಹ ವ್ಯಕ್ತಿಗಳಲ್ಲಿ ಬಹುತೇಕ ಜನರು ಬಹಳ ವಂಚಕರಾಗಿರುತ್ತಾರೆ. ಅವರಲ್ಲಿ ಅನೇಕರನ್ನು ಬಹಳ ಕೆಟ್ಟವರನ್ನಾಗಿ ನಾನು ಕಂಡಿದ್ದೇನೆ. ಅವರು ಎಲ್ಲ ವಿಧಗಳಲ್ಲೂ ದುಷ್ಟರಾಗಿದ್ದಾರೆ. ಅಂತಹ ಜನರ ಅಳುವ ಪ್ರವೃತ್ತಿಯನ್ನು ಕಂಡನಂತರ ಯಾವುದಾದರೂ ಸಭೆಯಲ್ಲಿ ದೈನ್ಯದಿಂದ ಬಹಿರಂಗವಾಗಿ ಪ್ರಾರ್ಥಿಸುವುದು ಸಹ ನನಗೆ ಅಸಹ್ಯವಾಗಿ ತೋರುವಂತಾಗಿದೆ."

ಕೆಲವರು ಹೇಗಿರುತ್ತಾರೆಂದರೆ ಅವರಿಗೆ ಕೆಲವು ದೃಶ್ಯಗಳನ್ನು ಕಂಡಾಗ ಅಳು ಕೂಡಲೆ ಬಂದು ಬಿಡುತ್ತದೆ. ಆದರೆ ಇದೊಂದು ತಾತ್ಕಾಲಿಕ ಭಾವಾವೇಶ ಮಾತ್ರವಾಗಿರುತ್ತದೆ. ಅವರ ಸ್ವಂತ ಲಾಭದ ಪ್ರಶ್ನೆ ಇರುವಾಗ ಇಂತಹ ಭಾವನೆ ಉಂಟಾಗುವುದಿಲ್ಲ. ಒಬ್ಬನಿಗೆ ತನ್ನ ಲಾಭನಷ್ಟದ ಪ್ರಶ್ನೆ ಇಲ್ಲದಿರುವಾಗ ಇಂತಹ ಭಾವನೆ ಉಂಟಾಗಬಹುದು. ಆದರೆ ಅದೇ ವ್ಯಕ್ತಿ ತನ್ನ ಸ್ವಂತ ಲಾಭಕ್ಕೋಸ್ಕರ ದೌರ್ಜನ್ಯ ಮಾಡುತ್ತಾನೆ. ಆಗ ಅವನಿಗೆ ದಯಾ ಭಾವನೆ ಉಂಟಾಗುವುದಿಲ್ಲ. ಅವನು ಎಂತಹ ಕೆಲಸ ಮಾಡುತ್ತಾನೆಂದರೆ ಅಲ್ಲಾಹನಿಗೆ ಅವು ಇಷ್ಟಕರವಾಗಿರುವುದಿಲ್ಲ. ಅಂತಹ ವ್ಯಕ್ತಿಯ ನಮಾಝ್ ಮತ್ತು ಇತರ ಆರಾಧನೆಗಳು ಕೇವಲ ತೋರಿಕೆಗಾಗಿರುತ್ತದೆ. ಅಲ್ಲಾಹನ **ರಹೀಮಿಯತ್** (ಪದೇ ಪದೇ ದಯೆದೋರುವ ಗುಣ) ಇದರ ಅನುಗ್ರಹ ಪಡೆಯಲು ಪ್ರಯತ್ನಿಸುವ ಸತ್ಯವಿಶ್ವಾಸಿಗಳಿಗೆ ಅಲ್ಲಾಹನು ಜಯ ನೀಡುವ ಖಾತರಿ ನೀಡಿದ್ದಾನೆ. ಆದರೆ ಅದರ ಪ್ರಥಮ ಶರತ್ತು ನಮಾಝ್‌ನಲ್ಲಿ ಮತ್ತು ಆರಾಧನೆಗಳಲ್ಲಿ ಭಯಭಕ್ತಿ ಹೊಂದುವುದಾಗಿದೆ. ಅಲ್ಲಾಹನಿಗೋಸ್ಕರ ಭಯಭಕ್ತಿ ಹೊಂದಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸತ್ಯವಿಶ್ವಾಸಿಯ ಸ್ಥಿತಿಯನ್ನು ಮನುಷ್ಯನ ಜನನದ ವಿವಿಧ ಹಂತಗಳಿಗೆ ಸಾದೃಶ್ಯಪಡಿಸುತ್ತಾ ವಿವರಿಸಿದ್ದಾರೆ. ಅದರ ಮೊದಲ ಭಾಗವನ್ನು ಮಾತ್ರ ನಾನು ವಿವರಿಸುತ್ತೇನೆ. ಅದರಲ್ಲಿ **ಅಲ್ಲಝೀನ ಹುಮ್ ಫೀ ಸಲಾತಿಹಿಮ್ ಖಾಶಿಊನ್** ಎಂಬ ವಚನದ ಪ್ರಕಾರ ಯಾವುದೇ ಒಳಿತು ಮತ್ತು ಆರಾಧನೆ ಸ್ಥಿರವಾಗಿರಬೇಕಾದರೆ ಅಲ್ಲಾಹನ **ರಹೀಮಿಯ್ಯತ್** ಎಂಬ ಗುಣದ ಜೊತೆಗೆ ಅಂಟಿಕೊಂಡಿರಲು ಪ್ರಯತ್ನ ಮಾಡುತ್ತಾ ಇರಬೇಕೆಂದು ಸ್ಪಷ್ಟವಾಗುತ್ತದೆ. ಅಲ್ಲಾಹನೊಂದಿಗೆ ಅಂಟಿಕೊಂಡಿರುವುದು ಸಹ ಅವನು ದಯಪಾಲಿಸುವ ಅನುಗ್ರಹದಿಂದಲೇ ಸಾಧ್ಯ ಎಂದು ಸಹ ತಿಳಿದು ಬರುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಸತ್ಯವಿಶ್ವಾಸಿಯ ಆಧ್ಯಾತ್ಮಿಕೆಯ ಪ್ರಥಮ ಹಂತ, ನಮಾಝ್ ಮತ್ತು ಅಲ್ಲಾಹನ ಸ್ಮರಣೆಯ ಸಂದರ್ಭದಲ್ಲಿ ಉಂಟಾಗುವ ಅಳಲು, ವಿನಯ ಮತ್ತು ಆತ್ಮದ ಬೇಗುದಿ ಮತ್ತು ತಾಪದ ಸ್ಥಿತಿ ತನ್ನಲ್ಲಿ ಉಂಟುಮಾಡುವುದಾಗಿದೆ. ಒಂದು ರೀತಿಯ ಭಯದ ಸ್ಥಿತಿ ತನ್ನಲ್ಲಿ ಉಂಟುಮಾಡಿ ಹೃದಯವನ್ನು ಅಲ್ಲಾಹನ ಕಡೆಗೆ ಬಾಗಿಸಿಡುವುದಾಗಿದೆ. ಅದರ ಬಗ್ಗೆ **ಖದ್ ಅಫ್‌ಲಹಲ್ ಮೂಮಿನೂನಲ್ಲಝೀನ ಹುಮ್ ಫೀ ಸಲಾತಿಹಿಮ್ ಖಾಶಿಊನ್** ಎಂದು ಹೇಳಲಾಗಿದೆ. ನಮಾಝ್‌ನಲ್ಲಿ ಮತ್ತು ಎಲ್ಲ ವಿಧಗಳ ದೇವ ಸ್ಮರಣೆಗಳಲ್ಲಿ ಅವರು ವಿನಯಾನ್ವಿತರಾಗಿರುತ್ತಾರೆ. ಅವರು ಅಳುತ್ತಾ ನೋವಿನಿಂದ ಭರಿತರಾಗಿ ಹೃತ್ಪೂರ್ವಕ ಉತ್ಸಾಹದಿಂದ ತಮ್ಮ ಪ್ರಭುವಿನ ಸ್ಮರಣೆಯಲ್ಲಿ ತಲ್ಲೀನರಾಗುತ್ತಾರೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪುನಃ ಹೇಳುತ್ತಾರೆ: "ಪವಿತ್ರ ಖುರ್‌ಆನನ್ನು ಅಧ್ಯಯನ ಮಾಡುವವರು ತಿಳಿದುಕೊಳ್ಳಬೇಕಾದುದೇನೆಂದರೆ ನಮಾಝ್‌ನಲ್ಲಿ ಭಯಭಕ್ತಿ ಹೊಂದುವುದು. ಆಧ್ಯಾತ್ಮಿಕ ವ್ಯಕ್ತಿತ್ವಕ್ಕೆ ಒಂದು ವೀರ್ಯಾಣುವಿನ ಹಾಗಿದೆ. ಆಧ್ಯಾತ್ಮಿಕವಾಗಿ ಪರಿಪೂರ್ಣ ಮನುಷ್ಯನ ಎಲ್ಲ ಗುಣಗಳು ಮತ್ತು ಚಿತ್ರಗಳು ಅದರಲ್ಲಿ ರಹಸ್ಯವಾಗಿ ಅಡಕವಾಗಿರುತ್ತದೆ."

ಇಲ್ಲಿ ಮನುಷ್ಯನ ಜನನದ ವಿವಿಧ ಹಂತಗಳ ಉದಾಹರಣೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನೀಡುತ್ತಿದ್ದಾರೆ. ವೀರ್ಯಾಣು ಗರ್ಭಕೋಶದಲ್ಲಿ ಪ್ರವೇಶಿಸಿ ಮಗುವಾಗುವ ಹಾಗೆ ಮತ್ತು ಅನಂತರ ಪರಿಪೂರ್ಣ ಮನುಷ್ಯನಾಗುವ ಹಾಗೆಯೇ ಭಯಭಕ್ತಿಯಿಂದ ಆಧ್ಯಾತ್ಮಿಕ ಉನ್ನತ ಹಂತಗಳು ದಾಟಿಸಲ್ಪಡುತ್ತವೆ. ಮತ್ತು ಮನುಷ್ಯನು ಆಧ್ಯಾತ್ಮಿಕವಾಗಿ ಪರಿಪೂರ್ಣಗೊಳಿಸಲ್ಪಡುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳುತ್ತಾರೆ: "ವೀರ್ಯವು ಗರ್ಭಕೋಶವನ್ನು ಪ್ರವೇಶಿಸುವ ತನಕ ಅದು ಅಪಾಯದ ಸ್ಥಿತಿಯಲ್ಲಿರುತ್ತದೆ. ಗರ್ಭಕೋಶದಲ್ಲಿ ಪ್ರವೇಶಿಸುವ ತನಕ ಅದು ನಷ್ಟವಾಗುವ ಭಯವಿರುತ್ತದೆ. ಗರ್ಭಕೋಶವನ್ನು ಪ್ರವೇಶಿಸಿದ ನಂತರ ಅಲ್ಲಾಹನು ತನ್ನ ನೈಸರ್ಗಿಕ ನಿಯಮಗಳ ಪ್ರಕಾರ ಅದನ್ನು ಬೆಳೆಸುತ್ತಾನೆ. ಇದೇ ರೀತಿ ಭಯಭಕ್ತಿಯ ಸ್ಥಿತಿಯನ್ನು ಹೊಂದಿದ ಸತ್ಯವಿಶ್ವಾಸಿ **ರಹೀಮ್** ಆಗಿರುವ ಅಲ್ಲಾಹನ ಜೊತೆ ಸಂಬಂಧ ಸ್ಥಾಪಿಸುವ ತನಕ ಅಪಾಯದಲ್ಲಿರುತ್ತಾನೆ. ಯಾವುದಾದರೂ ಪ್ರಯತ್ನದ ಫಲಸ್ವರೂಪ ರಹಿತವಾಗಿ ದೊರಕುವ ಅನುಗ್ರಹಗಳು ಅಲ್ಲಾಹನ **ರಹ್ಮಾನ್** ಎಂಬ ಗುಣದ ಅನುಗ್ರಹಗಳಾಗಿವೆ. ಭೂಮ್ಯಾಕಾಶಗಳಲ್ಲಿ ಮನುಷ್ಯನಿಗೋಸ್ಕರ ಅಲ್ಲಾಹನು ಒದಗಿಸಿದ ಎಲ್ಲವೂ ಅವನ **ರಹ್ಮಾನ್** ಎಂಬ ಗುಣದ ಪ್ರದರ್ಶನವಾಗಿದೆ. ಮನುಷ್ಯನ ಸೃಷ್ಟಿ ಸಹ ಅಲ್ಲಾಹನ **ರಹ್ಮಾನ್** ಗುಣದ ಕಾರಣದಿಂದಾಗಿದೆ. ಆದರೆ ಯಾವುದಾದರೂ ಕೆಲಸ ಮತ್ತು ಆರಾಧನೆಯ ಫಲವಾಗಿ ದೊರಕುವವುಗಳು ಅವನ **ರಹೀಮಿಯ್ಯತ್**‌ನ ಅನುಗ್ರಹಗಳಾಗಿವೆ. ಮಾನವರಿಗೋಸ್ಕರ ಅಲ್ಲಾಹನ ಈ ನಡೆವಳಿಕೆ ಜಾರಿಯಲ್ಲಿದೆ. ಮನುಷ್ಯನು ನಮಾಝ್, ಝಿಕ್ರೆ ಇಲಾಹಿ ಮತ್ತು ಭಯಭಕ್ತಿ ಹೊಂದುವಾಗ ಅವನು ಅಲ್ಲಾಹನ ಅನುಗ್ರಹಗಳಿಸಲು ತನ್ನನ್ನು ಸಿದ್ಧಪಡಿಸುತ್ತಾನೆ."

ವೀರ್ಯ ಮತ್ತು ಆಧ್ಯಾತ್ಮಿಕ ವ್ಯಕ್ತಿತ್ವದ ಪ್ರಥಮ ಮಟ್ಟದ ಮಧ್ಯೆ ಇರುವ ವ್ಯತ್ಯಾಸವೇನೆಂದರೆ ವೀರ್ಯ ಪುಷ್ಟೀಕರಿಸಲು ಗರ್ಭಕೋಶದ ಆವಶ್ಯಕತೆ ಇರುವಂತೆಯೇ ಭಯಭಕ್ತಿ ಭರಿತ ಪ್ರಥಮ ಹಂತದಲ್ಲಿರುವ ಆಧ್ಯಾತ್ಮಿಕ ವ್ಯಕ್ತಿಗೆ **ರಹೀಮ್** ಆಗಿರುವ ಅಲ್ಲಾಹನ ಆವಶ್ಯಕತೆ ಇರುತ್ತದೆ. ವೀರ್ಯವು ಗರ್ಭಕೋಶವನ್ನು ಪ್ರವೇಶಿಸದಿದ್ದಲ್ಲಿ ನಷ್ಟವಾಗಿ ಹೋಗುವ ಹಾಗೆ ಭಯಭಕ್ತಿ ಹೊಂದಿದವನು ಅಲ್ಲಾಹನ ಸಾಮೀಪ್ಯಗಳಿಸಲು ವಿಫಲನಾದರೆ ನಾಶವಾಗಬಹುದಾಗಿದೆ. ತೋರಿಕೆಗಾಗಿ ಮಾಡುವ ಆರಾಧನೆಗಳು **ರಹೀಮ್** ಆಗಿರುವ ಅಲ್ಲಾಹನ ಜೊತೆ ಸಂಬಂಧ ಸ್ಥಾಪಿಸುವ ಮೊದಲೇ ನಾಶವಾಗುತ್ತವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನೀಡಿದ ಈ ಉದಾಹರಣೆಯಿಂದ ತಿಳಿಯುವುದೇನೆಂದರೆ **ರಹೀಮ್** ಆಗಿರುವ ಅಲ್ಲಾಹನು ತನ್ನ ಆರಾಧನೆಗಳನ್ನು ಅಂಗೀಕರಿಸಿ ಯಾವಾಗ ಫಲನೀಡುತ್ತಾನೆಂದು ಮನುಷ್ಯನಿಗೆ ತಿಳಿದಿರುವುದಿಲ್ಲ. ಆದುದರಿಂದ ಮನುಷ್ಯನು ನಿರಂತರ ಪ್ರಯತ್ನ ಮಾಡುತ್ತಾ ಇರಬೇಕು. ಯಾವಾಗ ಗರ್ಭಧಾರಣೆ ಆಗುತ್ತದೆ ಎಂದು ತಿಳಿಯದಿರುವ ಹಾಗೆ ಅಲ್ಲಾಹನ ಅನುಗ್ರಹದ ಸ್ಥಿತಿಯೂ ಆಗಿರುತ್ತದೆ.

ವೀರ್ಯವು ಗರ್ಭಕೋಶದಲ್ಲಿ ಪ್ರವೇಶಿಸಿದ ನಂತರ ಸಹ ಕೆಲವು ಲೋಪದೋಷಗಳಿಗೆ ಪಾತ್ರವಾಗುವ ಸಾಧ್ಯತೆ ಇರುವ ಹಾಗೆ ಕೆಲವು ಸಾರಿ ಮನುಷ್ಯನು ಭಯಭಕ್ತಿ ಹೊಂದಿ ಫಲ ಗಳಿಸಿದ ನಂತರವೂ ಅವನಲ್ಲಿ ಹೆಮ್ಮೆ ತಲೆದೋರುತ್ತದೆ. ಪ್ರವಾದಿಗಳನ್ನು ನಂಬಿದ ನಂತರ ಕೆಲವರು ಬಿಟ್ಟುಬಿಡುತ್ತಾರೆ. ಜನರಲ್ಲಿ ಉಂಟಾಗುವ ಅಹಂಭಾವ ಅವರನ್ನು ಒಳಿತುಗಳಿಂದ ವಂಚಿತರನ್ನಾಗಿ ಮಾಡುತ್ತದೆ. ಅಲ್ಲಾಹನು ಕಳುಹಿಸಿದ ಮಹಾನುಭಾವರೊಂದಿಗೆ ಸಂಬಂಧ ಜೋಡಿಸಿರುವ ತನಕ ಜನರಿಗೆ ಅಲ್ಲಾಹನೊಂದಿಗೆ ಸಂಬಂಧವಿರುತ್ತದೆ. ಅವರು ಆ ಸಂಬಂಧ ಮುರಿದಾಗ ಅವರು ಪಥಭ್ರಷ್ಟತೆಯ ಹೊಂಡದಲ್ಲಿ ಬಿದ್ದು ಬಿಡುತ್ತಾರೆ. ಆದುದರಿಂದ ಯಾವಾಗಲೂ ಅಲ್ಲಾಹನ ಭಯ ಹೊಂದಿರಬೇಕು. ಅವನ **ರಹೀಮಿಯ್ಯತ್**‌ನಿಂದ ಲಾಭಗಳಿಸಲು ಪ್ರಯತ್ನ ಮಾಡುತ್ತಾ ಇರಬೇಕು. ಅಲ್ಲಾಹನಿಂದ ಅನುಗ್ರಹ ಬೇಡುತ್ತಾ ಇರಬೇಕು. ಅಲ್ಲಾಹನೊಂದಿಗೆ ನೈಜ ಸಂಬಂಧ ಸ್ಥಾಪಿಸಲು ಪ್ರಯತ್ನ ಮಾಡುತ್ತಾ ಇರಬೇಕು. ಸ್ವಲ್ಪ ಮಾತ್ರ ಪ್ರಯತ್ನ ಅಥವಾ ಒಂದಿಷ್ಟು ಪ್ರಾರ್ಥನೆ ಅಂಗೀಕಾರ ಪಡೆದ ಮಾತ್ರಕ್ಕೆ ಅಥವಾ ಕೆಲವು ಸತ್ಯವಾದ ಸ್ವಪ್ನಗಳನ್ನು ಕಂಡ ಬಗ್ಗೆ ಅಭಿಮಾನ ಹೊಂದಿದವರಾಗಬಾರದು.

ನಿಮ್ಮ ಒಂದಿಷ್ಟು ಪ್ರಾರ್ಥನೆ ಅಂಗೀಕಾರ ಪಡೆದುದರಿಂದ ಅಥವಾ ನಿಮಗೆ ಕೆಲವು ಸತ್ಯ ಸ್ವಪ್ನಗಳು ಕಾಣಿಸಿದ ಕಾರಣದಿಂದ ನೀವು ಜಯಗಳಿಸುವವರಲ್ಲಿ ಸೇರುವಿರಿ ಎಂದು ಅಲ್ಲಾಹನು ಎಲ್ಲಿಯೂ ಹೇಳಲಿಲ್ಲ. ಅಲ್ಲಾಹನ ಸಾಮೀಪ್ಯಗಳಿಸಿದವರು ಮತ್ತು ಜಯಗಳಿಸುವವರು ಅತ್ಯಂತ ವಿನಯಾನ್ವಿತರಾಗಿರುತ್ತಾರೆ. ಅವರು ನಿರರ್ಥಕ ವಿಷಯಗಳಿಂದ ದೂರ ಸರಿಯುವವರಾಗಿದ್ದರೂ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವವರಾಗಿದ್ದರೂ ತಮ್ಮ ಚಾರಿತ್ರ್ಯವನ್ನು ಸಂರಕ್ಷಿಸುವವರಾಗಿದ್ದರೂ ತಮ್ಮ ಪ್ರತಿಜ್ಞೆಗಳನ್ನು ಈಡೇರಿಸುವವರಾಗಿದ್ದರೂ ತಮ್ಮ ಆರಾದನೆಗಳನ್ನು ನಿಷ್ಠೆಯಿಂದ ಅನುಷ್ಠಿಸುವವರಾಗಿದ್ದರೂ ನಮಾಝುನ್ನು ಕ್ರಮಬದ್ಧವಾಗಿ ಅನುಷ್ಠಿಸುವವರಾಗಿದ್ದರೂ ಅವುಗಳನ್ನು ಸಂರಕ್ಷಿಸುವವರಾಗಿದ್ದರೂ ಸಹ ಅವರು ಹೀಗೆ ಹೇಳುತ್ತಾರೆ– 'ಓ ಅಲ್ಲಾಹ್ ನೀನು ನಮ್ಮನ್ನು ನಿನ್ನ ಅನುಗ್ರಹದ ಚಾದರದಿಂದ ಹೊದಿಸು. ಅದಿಲ್ಲದೆ ನಾವು ಏನೂ ಅಲ್ಲ' ಎಂದು. ಅಲ್ಲಾಹನ **ರಹೀಮಿಯ್ಯತ್**‌ನ ಅನುಗ್ರಹಗಳನ್ನು

ಹೀರಲು ಮನುಷ್ಯನು ಮಾಡುವ ನಿರಂತರ ಪ್ರಯತ್ನಗಳು ಸಹ ಸ್ವೀಕರಿಸಲ್ಪಡುವುದು ಅಲ್ಲಾಹನ ಅನುಗ್ರಹದಿಂದ ಮಾತ್ರವಾಗಿದೆ. ನಿರಂತರ ಪ್ರಯತ್ನಗಳಿಂದಲೇ ಅಲ್ಲಾಹನ ಅನುಗ್ರಹ ಲಭಿಸುತ್ತದೆ. ಅಲ್ಲಾಹನ ಅನುಗ್ರಹ ಗಳಿಸಿದ ಕಾರಣದಿಂದಲೇ ಮನುಷ್ಯನು ಅಂಗೀಕಾರ ಪಡೆಯುತ್ತಾನೆ. ಅವನ ಅಂತಿಮ ಗತಿ ಉತ್ತಮವಾಗುತ್ತದೆ.

ಆದುದರಿಂದ ನಾವು ನಮ್ಮ ಅಂತಿಮ ಗತಿಯ ಬಗ್ಗೆ ಗಮನ ಹರಿಸಬೇಕಾಗಿದೆ. ಅಲ್ಲಾಹನ ಅನುಗ್ರಹದಿಂದ ಅವನ **ರಹೀಮಿಯ್ಯತ**ನ್ನು ಹೀರುತ್ತಾ ನಮ್ಮ ಕರ್ಮಗಳಿಂದ ಪರಿಪೂರ್ಣ ಆರೋಗ್ಯಪೂರ್ಣವಾದ ಶಿಶು ಜನಿಸುವಂತಾಗಲಿ. ನಾವು ಎಂತಹವರಲ್ಲಿ ಸೇರಿದವರಾಗಬೇಕೆಂದರೆ ನಮ್ಮ ಆರಾಧನೆಗಳನ್ನು ನಾವು ವರ್ಧಿಸುತ್ತಾ ಹೋದ ಹಾಗೆ ನಮ್ಮ ವಿನಯ ಮತ್ತು ನಿಷ್ಠೆ ವರ್ಧಿಸುತ್ತಾ ಹೋಗಬೇಕು. ಹಝ್ರತ್ ಮುಹಮ್ಮದ್ ಪೈಗಂಬರರ صلى الله عليه وسلم ಆರಾಧನೆಗಳ ಮತ್ತು ಅವರ ದೇವ ಭಕ್ತಿಯ ಸೌಂದರ್ಯ ನಾವು ಊಹಿಸಲು ಸಹ ಸಾಧ್ಯವಿಲ್ಲದಷ್ಟು ಉನ್ನತ ಮಟ್ಟದ್ದಾಗಿದೆ. ಅಂತಹ ಮಹಾನುಭಾವರು ಸಹ 'ನಾನು ಅಲ್ಲಾಹನ ಅನುಗ್ರಹದ ಮೂಲಕವೇ ಸ್ವರ್ಗಕ್ಕೆ ಪ್ರವೇಶಿಸಲು ಸಾಧ್ಯ' ಎಂದು ಹೇಳಿರುವಾಗ ಒಬ್ಬನ ಕರ್ಮಗಳು ಅವನನ್ನು ಸ್ವರ್ಗಕ್ಕೆ ಒಯ್ಯುದೆಂದು ಅಥವಾ ಅಲ್ಲಾಹನು ಅವನಿಂದ ತೃಪ್ತನಾಗುವನು ಎಂದು ಹೇಳಲು ಹೇಗೆ ತಾನೆ ಸಾಧ್ಯ.

ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರಿಗೆ صلى الله عليه وسلم ಖಾತರಿ ನೀಡಿದ್ದನು. ಅವರನ್ನು ಲೋಕದ ಸುಧಾರಣೆಗಾಗಿ ನೇಮಿಸಿ ಕಳುಹಿಸಿದ್ದನು. ಅವರು ಮಾಡಿದಂತಹ ಸತ್ಕರ್ಮಗಳಿಗೆ ಸಮಾನವಾಗಿ ಬೇರೆ ಯಾರದೂ ಇರಲಿಲ್ಲ. ಹೀಗಿದ್ದರೂ ಅವರು ಎಂತಹ ಭಯಭಕ್ತಿ ಹೊಂದಿದ್ದರೆಂದರೆ ನಫ್ಲ್ ನಮಾಝ್ ಅನುಷ್ಠಿಸುತ್ತಾ ಇದ್ದಾಗ ಅವರ ಪಾದಗಳು ಬೀಗಿ ಹೋಗುತ್ತಿದ್ದುವು. ಅದರ ಪರಿವೆ ಅವರಿಗಿರಲಿಲ್ಲ.

ಆದುದರಿಂದ ನಾವು ಅಲ್ಲಾಹನ ಅನುಗ್ರಹವನ್ನು ಗಳಿಸಲು ನಿರಂತರ ವಿನಯಭರಿತ ವರ್ತನೆ ಮತ್ತು ಅಲ್ಲಾಹನ ಬಗ್ಗೆ ಭಯ ಯಾವಾಗಲೂ ಹೊಂದಬೇಕಾದುದು ಆವಶ್ಯಕವಾಗಿದೆ. ಪ್ರತಿಯೊಬ್ಬ ಸತ್ಯವಿಶ್ವಾಸಿಗೆ ಅವನು ನಮಾಝ್ ಪ್ರಾರಂಭಿಸುವ ಮತ್ತು ನಮಾಝ್ ಮುಗಿಸುವ ಮಧ್ಯೆ ಸ್ಪಷ್ಟವಾದ ವ್ಯತ್ಯಾಸ ಅವನಲ್ಲಿ ಉಂಟಾಗಬೇಕು. ನಮಾಝ್ ಪ್ರಾರಂಭಿಸುವಾಗ ಅವನಲ್ಲಿ ಅಹಂಭಾವದ ಒಂದು ಅಂಶವಿದ್ದರೆ ನಮಾಝ್ ಅನುಷ್ಠಿಸಿ ಮುಗಿತಾಯ ಗೊಳಿಸುವಾಗ ಅವನ ಹೃದಯದಿಂದ ಅದು ಹೊರಗೆಸೆಯಲ್ಪಟ್ಟು ಪರಿಶುದ್ಧವಾಗಬೇಕು. ಇದೇ ರೀತಿ ಬೇರೆ ಎಲ್ಲಾ ಆರಾಧನೆಗಳಾಗಬೇಕು. ಅವನ ಪ್ರತಿಯೊಂದು ಆರಾಧನೆಯ ಅಂತ್ಯದಲ್ಲಿ ಅವನ ಅಹಂಕಾರ ಕೊನೆಗೊಳ್ಳಲಿ ಮತ್ತು ಅವನಲ್ಲಿ ವಿನಯ ಉಂಟಾಗಲಿ. ದೈನಂದಿನ ಜೀವಿತದಲ್ಲಿ ಒಬ್ಬರಿನ್ನೊಬ್ಬರ ಜೊತೆ ವರ್ತಿಸುವಾಗ ಅಲ್ಲಾಹನ ಸಂಪ್ರೀತಿ ಗಳಿಸುವ ವಿನಯಾನ್ವಿತ ಭಾವನೆ ಹೃದಯದಲ್ಲಿರಲಿ. ನಮ್ಮ ಆರಾಧನೆಗಳು ನಮ್ಮನ್ನು ಅಲ್ಲಾಹನ ಮುಂದೆ ಇನ್ನಷ್ಟು ಬಾಗುತ್ತಾ ಹೋಗುವವರನ್ನಾಗಿ ಮಾಡಬೇಕು. ಅಲ್ಲಾಹನ **ರಹೀಮಿಯ್ಯತ್** ಅದಕ್ಕೆ ತಾಜಾ ಫಲಗಳನ್ನು ನೀಡುವಂತಾಗಲಿ. ಪ್ರತಿಯೊಂದು ದಿನವೂ ನಮ್ಮ ಬಲಹೀನತೆಗಳನ್ನು ನಮಗೆ ತೋರಿಸಿಕೊಟ್ಟು ನಮಗೆ ಅಲ್ಲಾಹನ ಅನುಗ್ರಹವನ್ನು ವರ್ಧಿಸುವುದಾಗಲಿ. ನಾವು ಯಾವಾಗಲೂ **ಇಸ್ತಿಗ್‌ಫಾರ್** ಮಾಡುವವರನ್ನಾಗಿ ಅಲ್ಲಾಹನು ನಮ್ಮನ್ನು ಮಾಡಲಿ. ನಾವು ಮಾಡುವ ಸತ್ಕರ್ಮ ಅಲ್ಲಾಹನ ದೃಷ್ಟಿಯಲ್ಲೂ ಸತ್ಕರ್ಮವಾಗಿದ್ದರೆ ಅದು ಅಲ್ಲಾಹನ ಸಂಪ್ರೀತಿಗಳಿಸುವ ಮಾರ್ಗವಾಗಲಿ. ನಮ್ಮಲ್ಲಿ ಪ್ರತಿಯೊಬ್ಬರು ಅಲ್ಲಾಹನ ದೃಷ್ಟಿಯಲ್ಲಿ ಜಯಶಾಲಿಯಾಗುವವರಾಗಲಿ – ಆಮೀನ್.

––––––––––––––––*****––––––––––––––

*Friday Sermon delivered by Hadrath Khaleefatul Masih Al Khamis* *(atba)*

*at Masjid Baithul Futhuh, London on 10-04-2015.*

Summarized by *Majlis Ansarullah Bharat*

*Kannada Translation:* M. Ubeidullah for Kannada Desk, Qadian

*Reviewed by:* M.P Ibrahim | *Typing:* U Basheer Ahmad

*Published By:* Kannada Isha'at Team for Nazarath Nashr-O-Isha'ath, Qadian

Email: *khutuba.kannada@gmail.com*